22

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 6/2/2020

# ಮಂದಿರ ನಿರ್ಮಾಣ ಸನ್ನಿಹಿತ

## ರಾಮಮಂದಿರ ಟ್ರಸ್ಟ್ ರಚನೆ ಘೋಷಿಸಿದ ಪ್ರಧಾನಿ

**ನವದೆಹಲಿ:** ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಿಸಬೇಕೆಂಬ ಕೋಟ್ಯಂತರ ಭಾರತೀಯರ ಕನಸು ನನಸಾಗುವ ಕಾಲ ಸನ್ನಿಹಿತವಾಗಿದೆ. ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ, ರಾಮಮಂದಿರ ಟ್ರಸ್ಟ್ ರಚನೆ ಕುರಿತು ಪ್ರಧಾನಿ ನರೇಂದ್ರ ಮೋದಿ ಬುಧವಾರ ಘೋಷಣೆ ಮಾಡಿದ್ದಾರೆ.



ಕೇಂದ್ರ ಸಂಪುಟ ಸಭೆಯ ನಂತರ ಲೋಕಸಭೆಯಲ್ಲಿ ಈ ಘೋಷಣೆ ಮಾಡಿದ ಪ್ರಧಾನಿ ಮೋದಿ, ಮಂದಿರ ನಿರ್ಮಾಣಕ್ಕಾಗಿ 'ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ' ಎಂಬ ಹೆಸರಿನ ಸ್ವಾಯತ್ತ ಟ್ರಸ್ಟ್ ರಚಿಸಲಾಗಿದೆ ಎಂದಿದ್ದಾರೆ. ಅಯೋಧ್ಯೆ ತೀರ್ಪು ನೀಡುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಈ ಟ್ರಸ್ಟ್ ರಚನೆಗೆ ಫೆ.9ರ ಗಡುವು ವಿಧಿಸಿತ್ತು. ಗಡುವು ಮುಗಿಯಲು 4 ದಿನಗಳು ಬಾಕಿಯಿರುವಾಗಲೇ ಸರ್ಕಾರ ಟ್ರಸ್ಟ್ ರಚನೆ ಕುರಿತು ಘೋಷಣೆ ಮಾಡಿದೆ.

▶ 12ನೇ ಪುಟಕ್ಕೆ

### ಟ್ರಸ್ಟ್‌ನಲ್ಲಿ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ

ಟ್ರಸ್ಟ್‌ಗೆ 15 ಸದಸ್ಯರ ಹೆಸರುಗಳನ್ನೂ ಪ್ರಕಟಿಸಲಾಗಿದೆ. ಈ ಪೈಕಿ ಪೇಜಾವರ ಮಠಾಧೀಶ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಪ್ರಮುಖರು. ನಿವೃತ್ತ ಅಟಾರ್ನಿ ಜನರಲ್ ಕೆ.ಪರಾಶರನ್, ಪ್ರಯಾಗ್‌ರಾಜ್‌ನ ಶಂಕರಾಚಾರ್ಯ ಸ್ವಾಮಿ ವಾಸುದೇವಾನಂದ ಸರಸ್ವತಿ ಮಹರಾಜ್ ಕೂಡ ಇದ್ದಾರೆ.

# ಮಂದಿರ ನಿರ್ಮಾಣ ಸನ್ನಿಹಿತ

1ನೇ ಪುಟದಿಂದ ▶ ಈ ಘೋಷಣೆ ಹೊರಬಿದ್ದ ಬೆನ್ನಲ್ಲೇ ಉತ್ತರಪ್ರದೇಶ ಸರ್ಕಾರವು ಸುನ್ನಿ ವಕ್ಫ್ ಮಂಡಳಿಗೆ ಅಯೋಧ್ಯೆಯ ರಾಮಮಂದಿರ ಸಂಕೀರ್ಣದಿಂದ 25 ಕಿ.ಮೀ. ದೂರದಲ್ಲಿ 5 ಎಕರೆ ಭೂಮಿಯನ್ನು ಹಂಚಿಕೆ ಮಾಡಿದೆ.

**ಎಲ್ಲರೂ ಬೆಂಬಲಿಸೋಣ:** ಬುಧವಾರ ಲೋಕಸಭೆ ಕಲಾಪದ ವೇಳೆ ಮಾತನಾಡಿದ ಪ್ರಧಾನಿ ಮೋದಿ, 'ಇದು ಅತ್ಯಂತ ಮಹತ್ವದ ಮತ್ತು ಐತಿಹಾಸಿಕ ವಿಚಾರಕ್ಕೆ ಸಂಬಂಧಿಸಿದ ಮಾಹಿತಿ ನೀಡಲು ಇಚ್ಛಿಸುತ್ತೇನೆ. ಕೋಟ್ಯಂತರ ದೇಶವಾಸಿಗಳಂತೆಯೇ ಈ ವಿಚಾರ ನನ್ನ ಹೃದಯಕ್ಕೂ ತೀರಾ ಹತ್ತಿರವಾದದ್ದು. ಅದರ ಬಗ್ಗೆ ಮಾತನಾಡುವುದು ನನ್ನ ಅದೃಷ್ಟ ಎಂದು ಭಾವಿಸಿದ್ದೇನೆ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಲು ವಿಸ್ತೃತ ಯೋಜನೆಯನ್ನು ರೂಪಿಸಿದ್ದೇವೆ. ಅದಕ್ಕಾಗಿ ಸ್ವಾಯತ್ತ ಟ್ರಸ್ಟ್ ರಚಿಸಲಾಗುತ್ತಿದೆ. ಯಾವುದೇ ನಿರ್ಧಾರ ಕೈಗೊಳ್ಳಲೂ ಈ ಟ್ರಸ್ಟ್‌ಗೆ ಮುಕ್ತ ಸ್ವಾತಂತ್ರ್ಯವಿರುತ್ತದೆ' ಎಂದು ಹೇಳಿದರು. ಜತೆಗೆ, ಅಯೋಧ್ಯೆ ತೀರ್ಪು ಬಳಿಕ ಶಾಂತಿ ಕಾಪಾಡಿದ 13 ಕೋಟಿ ಭಾರತೀಯರನ್ನು ಅಭಿನಂದಿಸುತ್ತೇನೆ. ಅಯೋಧ್ಯೆಯಲ್ಲಿ ಈಗ ಭವ್ಯ ರಾಮಮಂದಿರ ನಿರ್ಮಾಣಕ್ಕೆ ನಾವೆಲ್ಲರೂ ಬೆಂಬಲಿಸಬೇಕಾಗಿದೆ ಎಂದೂ ಮೋದಿ ಹೇಳಿದರು. ಅಷ್ಟರಲ್ಲಿ ಆಡಳಿತ ಪಕ್ಷದ ಸದಸ್ಯರು 'ಜೈ ಶ್ರೀ ರಾಮ್' ಎಂಬ ಘೋಷಣೆ ಕೂಗುವ ಮೂಲಕ ಮೋದಿ ನಿರ್ಧಾರವನ್ನು ಸ್ವಾಗತಿಸಿದರು.

**ದೆಹಲಿಯಲ್ಲಿ ಕಚೇರಿ:** ಹೊಸದಾಗಿ ರಚನೆಯಾದ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಹೆಸರಿನ ಟ್ರಸ್ಟ್‌ನ ಕಚೇರಿಯು ನವದೆಹಲಿಯ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ಇರಲಿದೆ ಎಂದು ಗೃಹ ಸಚಿವಾಲಯ ಮಾಹಿತಿ ನೀಡಿದೆ.

**ಸುನ್ನಿ ಮಂಡಳಿಗೆ 5 ಎಕರೆ ಭೂಮಿ:** ಅಯೋಧ್ಯೆಯ ಸೋಹಾವಾಲ್ ಎಂಬಲ್ಲಿನ ಧನ್ನೀಪುರ ಎಂಬ ಗ್ರಾಮದಲ್ಲಿ ಸುನ್ನಿ ಸೆಂಟ್ರಲ್ ವಕ್ಫ್ ಮಂಡಳಿಗೆ 5 ಎಕರೆ ಭೂಮಿಯನ್ನು ಸುಪ್ರೀಂ ಕೋರ್ಟ್ ಆದೇಶದನ್ವಯ ಉತ್ತರಪ್ರದೇಶ ಸರ್ಕಾರ ಬುಧವಾರ ಹಂಚಿಕೆ ಮಾಡಿದೆ. ಸಿಎಂ ಯೋಗಿ ಆದಿತ್ಯನಾಥ್ ನೇತೃತ್ವದಲ್ಲಿ ಬೆಳಗ್ಗೆ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು ಎಂದು ಸರ್ಕಾರದ ವಕ್ತಾರ ಶ್ರೀಕಾಂತ್ ಶರ್ಮಾ ತಿಳಿಸಿದ್ದಾರೆ.

**ಟ್ರಸ್ಟ್‌ನ ಇನ್ನುಳಿದ ಸದಸ್ಯರು:** ವಿಮಲೇಂದ್ರ ಮೋಹನ್ ಪ್ರತಾಪ್ ಮಿಶ್ರಾ, ಯುಗಪುರುಷ ಪರಮಾನಂದ ಜಿ ಮಹಾಜ್, ಸ್ವಾಮಿ ಗೋವಿಂದ ದೇವ್ ಗಿರಿ ಜಿ ಮಹರಾಜ್, ಡಾ. ಅನಿಲ್ ಮಿಶ್ರಾ, ಕಾಮೇಶ್ವರ ಚೌಪಾಲ್ (ಎಸ್‌ಸಿ ಸದಸ್ಯ), ಬೋರ್ಡ್ ಆಫ್ ಟ್ರಸ್ಟಿಯಿಂದ ನೇಮಕಗೊಳ್ಳುವ ಇಬ್ಬರು ಸದಸ್ಯರು, ಮಹಾಂತ್ ದಿನೇಂದ್ರ ದಾಸ್, ಕೇಂದ್ರ ಸರ್ಕಾರದಿಂದ ನೇಮಕ ಗೊಳ್ಳುವ ಪ್ರತಿನಿಧಿ, ಉ.ಪ್ರ.ಸರ್ಕಾರ ದಿಂದ ನೇಮಕಗೊಳ್ಳುವ ಪ್ರತಿನಿಧಿ, ಅಯೋಧ್ಯೆ ಜಿಲ್ಲೆಯ ಜಿಲ್ಲಾಧಿಕಾರಿ, ರಾಮ ಮಂದಿರ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿನ ಅಧ್ಯಕ್ಷರನ್ನು ಟ್ರಸ್ಟಿಗಳ ಮಂಡಳಿ ನಡೆಸಲಿದೆ.

**ಈ ಹಿಂದೆ ರಾಮಜನ್ಮಭೂಮಿ ನ್ಯಾಸ್ ಸಿದ್ಧಪಡಿಸಿದ ವಿನ್ಯಾಸದ ಮಾದರಿಯಲ್ಲೇ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಲಿ ಎಂದು ನಾವು ಬಯಸುತ್ತೇವೆ. ಏಕೆಂದರೆ, ಆ ವಿನ್ಯಾಸದೊಂದಿಗೆ ಸಾವಿರಾರು ಸಂತರು ಮತ್ತು ಹಿಂದೂಗಳ ಭಾವನೆ ಅಡಗಿದೆ.**

• ವಿಷ್ಣು ಸದಾಶಿವ ಕೋಕ್ಜೆ, ವಿಎಚ್‌ಪಿ ಅಧ್ಯಕ್ಷ

**5 ಎಕರೆ ಭೂಮಿಯನ್ನು ಸುನ್ನಿ ವಕ್ಫ್ ಮಂಡಳಿಗೆ ಕೊಡುವ ಬದಲು ನಮಗೇನಾದರೂ ಕೊಟ್ಟಿದ್ದರೆ, ನಾವು ಅಲ್ಲಿ ಮತ್ತೊಂದು ರಾಮಮಂದಿರವನ್ನು ನಿರ್ಮಿಸುತ್ತಿದ್ದೆವು.**

• ವಾಸಿಂ ರಿಜ್ವಿ, ಉ.ಪ್ರದೇಶ ಶಿಯಾ ವಕ್ಫ್ ಮಂಡಳಿ ಅಧ್ಯಕ್ಷ

**ಸುನ್ನಿ ವಕ್ಫ್ ಮಂಡಳಿಯು ಇಡೀ ಮುಸ್ಲಿಂ ಸಮುದಾಯದ ಪ್ರತಿನಿಧಿಯಲ್ಲ. ಸರ್ಕಾರ ಕೊಟ್ಟ ಭೂಮಿಯನ್ನು ಅದು ಸ್ವೀಕರಿಸಿದ್ದೇ ಆದಲ್ಲಿ, ಅದನ್ನು ದೇಶದ ಮುಸ್ಲಿಮರ ನಿರ್ಧಾರ ಎಂದು ಪರಿಗಣಿಸಲಾಗದು.**

• ಮೌಲಾನಾ ಯಾಸಿನ್ ಉಸ್ಮಾನಿ, ಎಐಎಂಪಿಎಲ್‌ಬಿ ಕಾರ್ಯಕಾರಿ ಸದಸ್ಯ